ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ ನಿರ್ದೇಶನಾಲಯ

ಸಂ ಕೆ.ಎಸ್.ಐ.ಸಿ.ಪಿಎಸ್/ಕೋವಿಡ್-19/2020-21 ದಿ: 06/04/2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್ 19 ಸಾಂಕ್ರಾಮಿಕವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಆದೇಶದಲ್ಲಿ ಸೂಚಿಸಿರುವ ನಿರ್ದೇಶನಗಳನ್ನು ಅನುಪಾಲನೆ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೋವಿಡ್ 19ರ ಸುಮೋಟೋ ರಿಟ್‌ಅರ್ಜಿ (ಸಿವಿಲ್) ಸಂ 4, 2020

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೋವಿಡ್ 19 ಸಾಂಕ್ರಾಮಿಕವಾಗಿರುವ ಹಿನ್ನೆಲೆಯಲ್ಲಿ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ 4, 2020 ಗೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಿದ್ದು, ಸದರಿ ಆದೇಶದ ಪ್ರತಿಯನ್ನು ಅಗತ್ಯಕ್ರಮಕ್ಕಾಗಿ ವಾಟ್ಸ್‌ಆಪ್ ಮೂಲಕ ಕಳುಹಿಸಲಾಗಿದೆ. ಆದೇಶದಲ್ಲಿ ಸೂಚಿಸಿರುವಂತೆ, ಬಾಲ ನ್ಯಾಯಕಾಯ್ದೆಯಡಿ ಬರುವ ವಿವಿಧ ಸಂಸ್ಥೆಗಳು ಹಾಗೂ ಫಾಸ್ಟರ್ ಪೋಷಣೆ ಹಾಗು ಕಿನ್‌ಶಿಪ್ ಪೋಷಣೆಯಲ್ಲಿರುವ ರಕ್ಷಣೆ ಮತ್ತು ಪೋಷಣೆಯಲ್ಲಿರುವ ಮಕ್ಕಳು ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳ ಆರೈಕೆ ಹಾಗು ರಕ್ಷಣೆ ಕುರಿತು ಅಗತ್ಯಕ್ರಮ ವಹಿಸಬೇಕಾಗಿದೆ.

ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಕೋವಿಡ್ 19 ಸೋಂಕು ಹರಡದಂತೆ ಎಚ್ಚರಿಕೆ ವಹಿಸಬೇಕಾಗಿದೆ.

1. ಕೋವಿಡ್ ಸೋಂಕು ಹರಡದಂತೆ ಹಾಗು ವಹಿಸಬೇಕಾಗಿರುವ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗು ವಿವಿಧ ಇಲಾಖೆಗಳು (ಆರೋಗ್ಯ, ಪೊಲೀಸ್, ಕಾನೂನು ಸೇವಾ ಪ್ರಾಧಿಕಾರ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್) ಹೊರಡಿಸಿರುವ ಆದೇಶಗಳು, ಸುತ್ತೋಲೆಗಳು, ಮಾರ್ಗದರ್ಶನಗಳು, ಕೈಪಿಡಿಗಳು, ಪೋಸ್ಟರ್‌ಗಳು, ಮಾಹಿತಿ ಪುಸ್ತಕಗಳು ಮಕ್ಕಳ ಪೋಷಣಾ ಸಂಸ್ಥೆಯ ಮುಖ್ಯಸ್ಥರಿಗೆ ಲಭ್ಯವಾಗಿರತಕ್ಕದ್ದು ಹಾಗು ಇವುಗಳು ಪಾಲನೆಯಾಗುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
2. ದೇಶಾದ್ಯಂತ ಕೋವಿಡ್ 19 ಹರಡುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಈ ವೈರಾಣು ಹರಡದಂತೆ ಕ್ರಮವಹಿಸಬೇಕಾಗಿದೆ

REDMI NOTE 8
AI QUAD CAMERA

REDMI NOTE 8
AI QUAD CAMERA

3. ಸಂಸ್ಥೆಯಿಂದ ವರ್ಗಾವಣೆ ಆದೇಶ ಪಡೆದ ಮಕ್ಕಳನ್ನು ಕಳುಹಿಸಲು ಜಿಲ್ಲಾ ಪ್ರಾಧಿಕಾರದಿಂದ ಸೂಕ್ತ ಆದೇಶ ಪಡೆಯುವುದು ಅಗತ್ಯವಾಗಿರುತ್ತದೆ.

ಈ ಪತ್ರದ ಅನುಬಂಧದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಅನುಸರಿಸಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಬಾಲ ನ್ಯಾಯ ಮಂಡಲಿ, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ಪೋಷಣಾ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಮುಖ್ಯಾಂಶವನ್ನು ನೀಡಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಓದಿ ಮನನ ಮಾಡಿಕೊಂಡು ಅದರಂತೆ ಕೋವಿಡ್ 19 ತಡೆಗಟ್ಟುವ ಸಲುವಾಗಿ ಎಲ್ಲಾ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು.

ಪತ್ರದ ಪ್ರತಿಯನ್ನು ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯ ಮಂಡಳಿ, ಸಿಸಿಐನ ಮುಖ್ಯಸ್ಥರು ಇವರುಗಳಿಗೆ ನೀಡುವುದು.

07.04.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು